ಬಿಡುತ್ತೀಯಾ?'

ನಿವಿ ನಿಧಾನಕ್ಕೆ ಕಣ್ತೆರೆದು ನೋಡಿದಳು.

'ಈಗ ಹೇಗೆ ಫೀಲ್ ಆಗ್ತಿದೆ ನಿವೇದಿತಾ?'

'ನನಗೆ ಮನಸ್ಸು, ಹೃದಯ ಹಗುರವಾದ ಭಾವನೆ ಇದೆ' ಎಂದ ನಿವಿಯ ಅಂತರ್ಯದಲ್ಲಿ ಜಾಗೃತವಾಗಿದ್ದ ಹೊಸ ಆತ್ಮಶಕ್ತಿ ಮುಖದ ಮೇಲೂ ಪ್ರತಿಫಲಿಸಿತ್ತು.

'ನೀನು ನಿನ್ನ ಪಾಸ್ಟ್ ಎಲ್ಲವನ್ನೂ ಹೇಳಿಕೊಂಡಿದ್ದೀಯಾ. ಅದು ನಿನ್ನ ಮನಸ್ಸಿನಿಂದ ಪೂರ್ತಿಯಾಗಿ ಅಳಿಸಲು ಸಾಧ್ಯವಿಲ್ಲದ ಸಂಗತಿ. ಆ ಸತ್ಯದೊಂದಿಗೆ ನೀನು ಜೀವಿಸಲೇಬೇಕು. ಆದರೆ ಅದಕ್ಕೆ ಮಹತ್ವ ಕೊಟ್ಟು ನಿನ್ನ ಇಂದಿನ ದಿನಗಳ ಖುಷಿಯನ್ನು ಹಾಳು ಮಾಡಿಕೊಳ್ಳಬಾರದಲ್ಲವೇ? ಸೋ ಯೂ ಆರ್ ರೆಡಿ ಫಾರ್ ಎ ನ್ಯೂ ಬಿಗಿನಿಂಗ್. ಎಲ್ಲವನ್ನೂ ಹೊಸತಾಗಿ ಶುರು ಮಾಡುತ್ತೀಯಾ, ಅಲ್ವಾ?'

'ಹೌದು ಮೇಡಮ್. ನೀವು ಹೇಳುವುದು ಸರಿ'.

ನಿವಿ ಆತ್ಮವಿಶ್ವಾಸದ ಧ್ವನಿಯಲ್ಲಿ ನುಡಿದಾಗ, ಅವಳ ಮಾತುಗಳು ಡಾ. ರೂಪಾರಿಗೆ, ಆಕೆಯ ಸಮಸ್ಯೆಗೊಂದು ಕೊನೆಗೊಳಿಸಲು ಸಾಧ್ಯವಾಗಿದ್ದರ ಬಗ್ಗೆ ಸಂತೃಪ್ತಿ ಮೂಡಿತು.

'ಎದ್ದೇಳು. ಹೊರಗೆ ಬಾ. ರಿಲ್ಯಾಕ್ಸ್ ಮಾಡು' ಎಂದು ಎಬ್ಬಿಸಿ ಹೊರ ಕರೆತಂದರು. ಆ ಮಂದ ಬೆಳಕಿನ ಕೋಣೆಯಿಂದ ಹೊರಬಂದಾಗ ನಿವಿಯ ಮುಖದಲ್ಲಿ ಒಂದು ತಿಳಿಯಾದ ಭಾವವಿತ್ತು. ಮನದಲ್ಲಿದ್ದ ಪ್ರಕ್ಷುಬ್ಧತೆ, ಕೋಲಾಹಲವೆಲ್ಲವೂ ಸ್ಫೋಟಗೊಂಡು, ಎಲ್ಲವೂ ಶಾಂತವಾದ ನಿರಾಳತೆ ಅವಳ ಮುಖದಲ್ಲಿತ್ತು.

ನಿವಿ ಕರೆ ಮಾಡಿ ತಿಳಿಸಿದಾಗ ಅಲ್ಲೇ ರೆಸ್ಟೋರೆಂಟಿನಲ್ಲಿ ಪ್ರದೀಪ ಕೂಡಲೇ ಒಂದೇ ಉಸಿರಿಗೆ ಧಾವಿಸಿ ಬಂದಿದ್ದ.

'ನಿವಿ. ಆರ್ ಯೂ ಆಲ್‌ರೈಟ್?' ಎಂದು ಮೊದಲು ಅವಳತ್ತ ಬಾಗಿ ವಿಚಾರಿಸಿದ.

'ಶೀ ಈಸ್ ಪರ್ಫೆಕ್ಟ್‌ಲೀ ಆಲ್‌ರೈಟ್ ಪ್ರದೀಪ್. ಡೋಂಟ್ ವರಿ' ಎಂದರು. ಅವಳನ್ನು ಹೊರಡಿಸಿ ಕಾರಿನ ಬಳಿ ಕರೆ ತಂದು ಕುಳ್ಳಿರಿಸಿದವನು, ಕೂಡಲೇ ಒಳ ಬಂದು ಆತಂಕದಿಂದ ವಿಚಾರಿಸಿದ, 'ನೀವು ಏನೂ ಹೇಳಲೇ ಇಲ್ಲ?'

'ನಿಮ್ಮ ಪತ್ನಿ ಈಗ ಸರಿಹೋಗಿದ್ದಾರೆ. ಆತಂಕ ಬೇಡ. ಇನ್ನು ನನ್ನ ಅಗತ್ಯ ಹೆಚ್ಚಾಗಿ ನಿಮಗೆ ಬೀಳುವುದಿಲ್ಲ. ನಿಮ್ಮ ಬಳಿ ಮಾತನಾಡಬೇಕು. ಮಧ್ಯಾಹ್ನ ಮೂರು ಗಂಟೆಗೆ ಬನ್ನಿ. ಬರುವಾಗ ನಿವೇದಿತಾರ ಅಪ್ಪ, ಅಮ್ಮನನ್ನೂ ಕರೆ ತನ್ನಿ. ಐ ನೀಡ್ ಟು ಟಾಕ್. ನಿವಿ ಬರೋದು ಬೇಡ' ಎಂದರು. ಪ್ರದೀಪ ಅಷ್ಟು ಕಾಯಲು ಸಿದ್ಧನಿರಲಿಲ್ಲವಾದರೂ ಎದುರಾಡುವಂತಿರಲಿಲ್ಲ. ನಿವಿಯ ಹೆತ್ತವರನ್ನು ಬರಹೇಳಿದ್ದು ಏಕೆಂದು ಗೊಂದಲವಿದ್ದರೂ ಸಕಾರಣಗಳಿಲ್ಲದೇ ಅವರು ಬರಲು ತಿಳಿಸುವುದಿಲ್ಲ ಎಂಬ ನಂಬಿಕೆಯೂ ಇತ್ತು. ತನ್ನ ಕುತೂಹಲವನ್ನು ಬಲವಂತವಾಗಿ ಹತ್ತಿಕ್ಕಿಕೊಂಡು ಅವನು ಗೋಣಾಡಿಸಿ ಅಲ್ಲಿಂದ ಹೊರಟ. ನಿವಿ ಮೌನವಾಗಿ ಕುಳಿತಿದ್ದರೂ ಮುಖದಲ್ಲಿ ಎಂದೂ ಕಂಡಿರದ ನಿರ್ಮಲ ಭಾವ, ಒಂದು ಅಪೂರ್ವ ಪ್ರಭೆಯನ್ನು ಪ್ರದೀಪನ ಹೃದಯ ಗುರುತಿಸಿತು.

ಅವನು ಯಾವ ಪ್ರಶ್ನೆಗಳನ್ನು ಕೇಳದೇ ಹೋದರೂ ನಿವಿ ಬಾರಿ ಬಾರಿಗೆ ಅವನೆಡೆಗೆ ತಿರುಗಿ ನೋಡುತ್ತಿದ್ದಳು.

ಕಡೆಗೆ ಅವಳೇ ಸೋತು, 'ನೀವೇನೂ ಕೇಳುವುದಿಲ್ಲವಾ?'

'ಇಲ್ಲ. ಹಳೇದೇನಿದ್ದರೂ ಅದು ಮುಗಿದ ಅಧ್ಯಾಯ! ಅದರ ಕುರಿತು ಯಾಕೆ ಚಿಂತಿಸಬೇಕು? ಇಂದಿನ ದಿನವನ್ನು ಖುಷಿಯಾಗಿರಿಸಿಕೊಂಡರೆ ಅದೇ ಸಾಕು' ಎಂದ.

'ನೀವು ಹೇಳೋದು ಸರಿ. ರೂಪಾ ಮೇಡಮ್ ಕೂಡಾ ಅದೇ ಮಾತನ್ನು ಹೇಳಿದರು. ನಾನೇ ಸ್ವಲ್ಪ ಅತಿರೇಕವಾಗಿ ಆಡಿಬಿಟ್ಟೆ. ನಿಮ್ಮ ಬಗ್ಗೆ ಇಲ್ಲಸಲ್ಲದ್ದನ್ನೆಲ್ಲಾ ಹೇಳಿದೆ. ಟಾರ್ಚರ್ ಕೊಟ್ಟೆ. ಐ ಆ್ಯಮ್ ಸಾರಿ ಪ್ರದೀಪ್' ಎಂದಳು ಮೃದುವಾಗಿ.

'ಅಯ್ಯೋ, ನೀನ್ಯಾಕೆ ಸಾರಿ ಕೇಳ್ತೀಯಾ. ನೀನೇನೂ ಯಾವುದನ್ನೂ ಉದ್ದೇಶಪೂರ್ವಕವಾಗಿ ಮಾಡಿಲ್ಲವಲ್ಲ. ಕೆಲವು ಸಲ ನಮ್ಗೇ ಗೊತ್ತಿಲ್ಲದೇ ನಮ್ಮ ನಡವಳಿಕೆ ವ್ಯತಿರಿಕ್ತವಾಗುತ್ತೆ. ಅದನ್ನು ನೀನು ನಿಯಂತ್ರಿಸಿಕೊಂಡರೆ ಸರಿಹೋಗುತ್ತೆ. ನಿನಗೆ ಈಗ ಅದರ ಅರಿವು ಮೂಡಿದೆಯಲ್ಲವೇ. ಅದನ್ನು ಅಳವಡಿಸಿಕೊಳ್ಳಲು ಯತ್ನಿಸು, ಸರೀನಾ?' ಅವನು ಮೃದುವಾಗಿ ಅವಳ ಕೆನ್ನೆ ತಟ್ಟಿ ಪ್ರೀತಿಯಿಂದ ನುಡಿದಾಗ ಅವನ ಬಗ್ಗೆ ನಿವಿಗೆ ಅಭಿಮಾನ ಮೂಡಿತು.

ಇಷ್ಟು ವಿಚಾರವಂತ ಪತಿ ತನಗೆ ದೊರಕಿರುವಾಗ ಸಲ್ಲದ್ದರ ಬಗ್ಗೆ ತಾನು ಪ್ರಾಮುಖ್ಯತೆ ಕೊಟ್ಟು ಬದುಕಲ್ಲಿ ಅಶಾಂತಿಯನ್ನು ತುಂಬಿಕೊಂಡೆನಲ್ಲಾ ಎನಿಸಿತು. ಮನೆಗೆ ಹಿಂತಿರುಗಿದ ಬಳಿಕವೂ ನಿವಿ ಕೋಣೆಗೆ ಹೋಗದೇ ಹಾಲ್‌ನಲ್ಲೇ ಕುಳಿತು ನಿಧಿಯನ್ನು ಆಡಿಸಿದಳು. ಪ್ರಭಾವತಿಯ ಬಳಿಯೂ ನಗುನಗುತ್ತಾ ಮಾತನಾಡಿದಾಗ ಆಕೆಗೆ ಅಚ್ಚರಿಯಾದರೂ ಈ ಬದಲಾವಣೆಯಿಂದ ಆಕೆ ಖುಷಿಪಟ್ಟಳು.

* * *

'ನಿಮಗೆಲ್ಲಾ ಯಾಕೆ ಬರೋದಿಕ್ಕೆ ಹೇಳಿದೀನಿ ಅಂದರೆ ನಾನೀಗ ಹೇಳುವ ಸಂಗತಿ ನಿಮಗೆ ತಿಳಿಸಲೇಬೇಕಾಗಿದೆ ಅನ್ನೋದು ನನ್ನ ಅಭಿಪ್ರಾಯ. ಇದು ನಿವಿಯ ಬದುಕಿಗೆ ಸಂಬಂಧಪಟ್ಟಿದ್ದು. ನೀವು ಪೇರೆಂಟ್ಸ್ ಆಗಿ ಮತ್ತು ಪತಿಯಾಗಿ ಆಕೆಯ ಬದುಕಿನ ಕರಾಳ ಘಟನೆ ಅವಳ ಈಗಿನ ದಿನಗಳನ್ನು ಹೇಗೆ ಗಾಸಿ ಮಾಡಿದೆ ಎಂದು ತಿಳಿಸಲು.'

ಪ್ರದೀಪ, ವೀಣಾ ಮತ್ತು ಕೇಶವರು ಅವರು ತಿಳಿಸಲಿರುವ ಸಂಗತಿಯನ್ನು ಆಲಿಸಲು ಕಾತುರರಾಗಿ ಕುಳಿತಿದ್ದರು. ಪ್ರದೀಪನೂ ಕುಳಿತಲ್ಲೇ ಚಡಪಡಿಸುತ್ತಿದ್ದ.

'ಅರವಿಂದ, ಅಂದರೆ ನಿವಿಯ ಮಾವ...'

'ಹೌದು ನನ್ನಣ್ಣ. ಅಂದರೆ ದೊಡ್ಡಪ್ಪನ ಮಗ' – ಕೇಶವರು ಪತ್ನಿಯ ಕೈ ತಟ್ಟಿ ಪೂರ್ತಿ ಮಾತು ಆಲಿಸುವಂತೆ ಸಂಜ್ಞೆ ಮಾಡಿದರು.

'ಹೌದು. ಆತ ನಿಮ್ಮನೆಯಲ್ಲಿರುವ ಕಾಲದಲ್ಲಿ ಆತನಿಗೆ ಮದುವೆ ಆಗಿತ್ತಾ?' ಡಾ. ರೂಪಾ ಗಂಭೀರವಾಗಿ ಪ್ರಶ್ನಿಸಿದರು.

'ಹೌದು. ಮದುವೆ ಆಗಿ ಮಗು ಬೇರೆ ಆಗಿತ್ತು. ನಿವಿಗೂ ಕೃತ್ತಿಕಾಗೂ ಆರು ವರ್ಷಗಳ ಅಂತರ ಇದೆ. ಆದರೆ ಕೃತ್ತಿಕಾಗೆ ಇಪ್ಪತ್ತೂರಕ್ಕೇ ಮದ್ವೆ ಆಯಿತು. ನಿವೀದು ಸ್ವಲ್ಪ ಲೇಟಾಯ್ತು. ಹಾಗಾಗಿ ಕೃತ್ತಿಕಾ ಮಕ್ಳು ದೊಡ್ಡವರು'.

'ಸರಿ. ನೇರ ವಿಚಾರಕ್ಕೆ ಬರ್ತೀನಿ. ನಿವಿಗೆ ಆ ವ್ಯಕ್ತಿಯಿಂದ ಅವಳು ಚಿಕ್ಕವಳಿರುವಾಗ ಲೈಂಗಿಕ ದೌರ್ಜನ್ಯ ನಡೆದಿದೆ. ಚೈಲ್ಡ್ ಅಬ್ಯೂಸ್ ಆಗಿದೆ. ಅದು ಯಾರಲ್ಲೂ ಹೇಳಿಕೊಳ್ಳದೆ ಒಳಗೇ ಉಳಿದು ಅವಳ ನಡವಳಿಕೆ ಮೇಲೆ ಪ್ರಭಾವ ಬೀರಿದೆ. ಆಕೆ ಚಿಕ್ಕವಳಿದ್ದಾಗ ಅವಳ ಅತಿರೇಕದ ವರ್ತನೆಗೆ ಇದೇ ಕಾರಣ. ನಾನು ಅವಳನ್ನು ಅವಳ ಮನಸ್ಸಿನ ಮೂರು ಪದರುಗಳಲ್ಲಿ ಒಳ ಹೊಕ್ಕು ನೋಡಿದೆ. ತಾಯಿಯಾಗಿ, ನಂತರ ಪತ್ನಿಯಾಗಿ ಮತ್ತು ಬಾಲಕಿಯಾಗಿದ್ದಾಗ. ಆಗ ಈ ಘಟನೆ ಅವಳ ಬಾಯಿಂದ ಹೊರ ಬಂದಿತು. ಆ ಕೀಳರಿಮೆ, ಭಯ ಹೋಗಲಾಡಿಸದೆ ಅವಳಲ್ಲಿ ಖಿನ್ನತೆ, ಆತಂಕ, ಭಯ, ಪಾಪ ಪ್ರಜ್ಞೆ ಇದೆಲ್ಲವೂ ಸಮ್ಮಿಲಿತವಾಗಿ ಒಳಗೇ ನಲುಗಿ ಹೋಗಿದ್ದಳು. ಅದು ಹೊರಗೆ ವ್ಯಕ್ತಪಡಿಸಲಾರದೇ ಒಳಗೇ ದಬ್ಬಿಕೊಂಡು ನಲುಗುತ್ತಿದ್ದಳು. ಅದು ಇನ್ನಾವುದೋ ರೂಪದಲ್ಲಿ – ಸೇಡು, ಸಿಟ್ಟು, ಕಣ್ಣೀರು, ಹತಾಶೆ, ಮೌನ, ಖಿನ್ನತೆ ನಾನಾ ಪ್ರತೀಕವಾಗಿ ಹೊರಗೆ ಬರುತ್ತಿತ್ತು. ಆಗಿದ್ದು ಆಗಿಹೋಗಿದೆ. ಅದನ್ನು ಬದಲಿಸಲು ಸಾಧ್ಯವಿಲ್ಲ. ಆದರೆ ಮುಂದೆ ಅವಳು ಸಕಾರಾತ್ಮಕವಾಗಿ ಬದುಕಲು ನೀವೆಲ್ಲರೂ ಆದಷ್ಟೂ ಸಹಕರಿಸುತ್ತಾ ಅವಳ ಜೊತೆಗೆ ನಿಲ್ಲಬೇಕು. ಶೀ ವಿಲ್ ಬಿ ಆಲ್‌ರೈಟ್. ಈಗ ಆಕೆ ತನ್ನ ಹೃದಯದ ಹೊರೆಯನ್ನು ಹೇಳಿಕೊಂಡು ಹಗುರಳಾಗಿದ್ದಾಳೆ. ಅವಳೂ ಮುಕ್ತವಾಗಿ ನಿಮ್ಮೊಡನೆ ಬೆರೆಯುತ್ತಾಳೆ. ಸೋ, ಈಗ ಎಲ್ಲವೂ ಸರಿಹೋಗಿದೆ' ಎಂದಾಗ ಅವರು ಆಡಿದ ಸತ್ಯವನ್ನು ನಂಬಲಾರದವರಂತೆ ಸ್ತಂಭೀಭೂತರಾಗಿ ಕುಳಿತಿದ್ದರು ವೀಣಾ ಮತ್ತು ಕೇಶವರು.

'ನಾವಿಬ್ರೂ ಕೆಲಸಕ್ಕೆ ಹೋಗ್ತಿದ್ದೆವು. ಆತ ಮುಂಚಿನಿಂದಲೂ ನನಗೆ ಆತ್ಮೀಯ. ಹಾಗಾಗಿ ಮನೆಗೆ ಬಂದು ಹೋಗಿ ಮಾಡುತ್ತಿದ್ದ. ಕಾಂಟ್ರಾಕ್ಟ್ ಮಾಡ್ತೀನಿ ಅಂತ ನಮ್ಮನೇಲೇ ಇರುತ್ತಿದ್ದ. ಹೊಸ ಮನೆಗೆ ಹಣ ಕಮ್ಮಿ ಬಿದ್ದಾಗ ಧನಸಹಾಯವನ್ನೂ ಮಾಡಿದ್ದ. ನಿವಿ ಶಾಲೆಯಿಂದ ಬೇಗ ಬರ್ತಿದ್ಲು. ಅವನೂ ಮನೇಲಿರುತ್ತಿದ್ದ. ನಮ್ಮವರೇ ಅಂತ ನಾವೂ ನಂಬಿ ಧೈರ್ಯದಲ್ಲಿದ್ದೆವು. ಅಂಥವನು ನಮ್ಮ ಮಗು ಜೊತೆ ಹೀಗೆ ಕೆಟ್ಟದಾಗಿ ವರ್ತಿಸ್ತಾನೆ ಅಂತ ಕನಸಲ್ಲೂ ನೆನೆಸಿರಲಿಲ್ಲ. ಪಾಪ ನಿವಿ. ಆಗೆಲ್ಲಾ ಎಷ್ಟೊಂದು ನರಳಾಡಿತೋ. ನಮ್ಮ ಮಗು ಬಾಲ್ಯದಲ್ಲಿ ಇಷ್ಟೆಲ್ಲಾ ನರಳಿತು ಅಂತ ನೆನೆಸುವಾಗ ಹೊಟ್ಟೆ ಉರಿಯುತ್ತೆ. ಪಾಪದ್ದು! ನಿಜ. ಅವಳು ತನ್ನ ಅಂತರಂಗವನ್ನು ನಮ್ಮೆದುರು ಮನಬಿಚ್ಚಿ ಹೇಳಿಕೊಳ್ಳುವ ವಾತಾವರಣವೇ ನಾವು ಮನೇಲಿ ಸೃಷ್ಟಿ ಮಾಡಲಿಲ್ಲ. ಹಾಗಾಗಿ ನಮ್ಮ ಕಂದ ನಮಗೆ ಅಪರಿಚಿತವಾಗಿಯೇ ಉಳಿದುಹೋದಳು. ಹಾಳಾದವನನ್ನು ನಂಬಿ ಕೆಟ್ಟೆವು. ನಾವು ಹೊಸ ಮನೆಗೆ ಬಂದ ನಂತರ ಅವನು ಮೈಸೂರಿನಲ್ಲೇ